ತಾಲ್ಲೂಕು ಅಭಿವೃದ್ಧಿ ಮಂಡಳಿ ಸದಸ್ಯರಾಗಿಯೂ ಅವರು ತಮ್ಮ ಸೇವೆಯನ್ನು ಕಾರ್ಯ ನಿರ್ವಹಿಸಿದ್ದರು. ಅತ್ಯಂತ ಪ್ರಾಮಾಣಿಕರಾಗಿ ತಮ್ಮ ಜೀವನದುದ್ದಕ್ಕೂ ರೈತರ ಬಗ್ಗೆ ಕಳಕಳಿ ಇಟ್ಟುಕೊಂಡಿದ್ದಂತಹ ವ್ಯಕ್ತಿಯನ್ನು ಇವತ್ತು ನಾವು ಕಳೆದುಕೊಂಡಿದ್ದೇವೆ. ಹಾಗೆಯೇ ಬೆಳಗಾವಿ ಜಿಲ್ಲೆ ಅವರಡಿ ಗ್ರಾಮದಲ್ಲಿ 1916ನೇ ಡಿಸೆಂಬರ್, 25ರಂದು ಜನಿಸಿದ ಮಾನ್ಯ ನಾಡಗೌಡರು ಜನಪ್ರಿಯ ವಕೀಲರಾಗಿದ್ದರು ಮತ್ತು ಎರಡು ಅವಧಿಗೆ ವಿಧಾನಸಭೆಯ ಸದಸ್ಯರಾಗಿ ಮುಧೋಳ ಕ್ಷೇತ್ರದಿಂದ ಆಯ್ಕೆಯಾಗಿದ್ದರು. ಕೃಷಿಕರ ಮತ್ತು ಕೃಷಿ ಕಾರ್ಮಿಕರ ಬಗ್ಗೆ ಕಳಕಳಿ ಇದ್ದಂತಹ ಹಿರಿಯರಾಗಿದ್ದರು. ಮಾನ್ಯ ಅಮರೇಗೌಡರವರು ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾಗಿ 4ನೇ ವಿಧಾನ ಸಭೆಗೆ ಸಿಂಧನೂರು ಕ್ಷೇತ್ರದಿಂದ ಚುನಾಯಿತರಾಗಿದ್ದರು. ವಕೀಲರಾಗಿ ತಮ್ಮದೇ ಆದಂತಹ ಒಂದು ಸೇವೆಯನ್ನು ಸಲ್ಲಿಸಿದ್ದಂತಹ ವ್ಯಕ್ತಿಯನ್ನು ಇವತ್ತು ನಾವು ಕಳೆದುಕೊಂಡಿದ್ದೇವೆ. ಈ ಮೂವರು ಮಹನೀಯರು ಸಾರ್ವಜನಿಕ ಬದುಕಿನಲ್ಲಿ ತಮ್ಮದೇ ಆದಂತಹ ವಿಶಿಷ್ಟ ಛಾಪನ್ನು ಬಿಟ್ಟು ಹೋಗಿದ್ದಾರೆ. ಅವರುಗಳ ನಿಧನಕ್ಕೆ ಶ್ರದ್ಧಾಂಜಲಿ ಸಲ್ಲಿಸಿ, ಸನ್ಮಾನ್ಯ ಸಭಾಧ್ಯಕ್ಷರು ತಂದಿರುವಂತಹ ನಿರ್ಣಯಕ್ಕೆ ನನ್ನ ಧ್ವನಿಗೂಡಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಮೃತರ ಗೌರವಾರ್ಥ ಸದನದ ಗೌರವಾನ್ವಿತ ಸದಸ್ಯರೆಲ್ಲರೂ ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಬೇಕೆಂದು ಕೋರುತ್ತೇನೆ.

(ಮೃತರ ಗೌರವಾರ್ಥ ಸದನವು ಒಂದು ನಿಮಿಷ ಮೌನವನ್ನಾಚರಿಸಿತು)

ಸದನವು ಅಂಗೀಕರಿಸಿರುವ ಸಂತಾಪ ಸೂಚಕ ನಿರ್ಣಯವನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಿಕೊಡಲಾಗುವುದು.

3. ಅಧ್ಯಕ್ಷರ ಅಪ್ಪಣೆ ಮೇರೆಗೆ:

ವಿಷಯ: ಹಕ್ಕುಚ್ಯುತಿ ನಿರ್ಣಯದ ಮಂಡನೆ ಚರ್ಚೆಗೆ ಅವಕಾಶ ಕೋರಿಕೆ

ಶ್ರೀ ದಿನೇಶ್ ಗುಂಡೂರಾವ್ (ಗಾಂಧಿನಗರ): ಮಾನ್ಯ ಅಧ್ಯಕ್ಷರೆ, ನಾನು ಹಕ್ಕುಚ್ಯುತಿ ಮಂಡನೆಗಾಗಿ ಸೂಚನೆಯೊಂದನ್ನು ತಮಗೆ

ಕಳುಹಿಸಿಕೊಟ್ಟಿದ್ದೇನೆ, ಆ ವಿಚಾರದಲ್ಲಿ ದಯವಿಟ್ಟು ತಾವು ಪರಿಶೀಲನೆ ಮಾಡಬೇಕಾಗುತ್ತದೆ.

ಅಧ್ಯಕ್ಷರು: ತಾವು ಆ ಸೂಚನೆಯನ್ನು ಕೊಟ್ಟಿದ್ದೀರಾ?

ಶ್ರೀ ದಿನೇಶ್ ಗುಂಡೂರಾವ್: ಕಾರ್ಯದರ್ಶಿಗಳಿಗೆ ಅದನ್ನು ಕೊಟ್ಟಿದ್ದೇನೆ.

ಅಧ್ಯಕ್ಷರು: ತಾವು ಕೊಟ್ಟಿದ್ದಲ್ಲಿ ಅದನ್ನು ನಾನು ಪರಿಶೀಲನೆ ಮಾಡುತ್ತೇನೆ.

ಶ್ರೀ ದಿನೇಶ್ ಗುಂಡೂರಾವ್: ಮಾನ್ಯ ಅಧ್ಯಕ್ಷರೆ, ಅದನ್ನು ಪ್ರಸ್ತಾಪಿಸಲಿಕ್ಕೆ ತಾವು ನನಗೆ ಇವತ್ತೇ ಅವಕಾಶ ಮಾಡಿಕೊಡಬೇಕು. ನಮ್ಮ ತಂದೆಯವರ ಮೇಲೆ, ನನ್ನ ಮೇಲೆ ಹಾಗೂ ನಮ್ಮ ತಾಯಿಯವರ ಮೇಲೆ ನಿನ್ನೆ 'ಈ ಸಂಜೆ' ದಿನಪತ್ರಿಕೆಯಲ್ಲಿ ಸುದ್ದಿಯೊಂದು ಪ್ರಕಟವಾಗಿದೆ. ನಾವು ಭೂ ಕಬಳಿಕೆ ಮಾಡಿದ್ದೇವೆಂದು ಎ.ಟಿ.ರಾಮಸ್ವಾಮಿ ಅಧ್ಯಕ್ಷತೆಯ ಸಮಿತಿ ಹೇಳಿದೆ ಎಂದು ಅದರಲ್ಲಿ ವರದಿಯಾಗಿದೆ. ಏನೋ ಒಂದು ರೀತಿಯಲ್ಲಿ ತಮ್ಮ ತೇಜೋವಧೆ ಮಾಡತಕ್ಕ ಪ್ರಯತ್ನ ನಡೆದಿದೆ. ಅದರ ಬಗ್ಗೆ ಪ್ರಸ್ತಾಪಿಸಲು ದಯವಿಟ್ಟು ತಾವು ನನಗೆ ಅವಕಾಶ ಕೊಡಬೇಕು.

ಅಧ್ಯಕ್ಷರು: ತಾವು ಕೊಟ್ಟಿರುವ ಸೂಚನೆ ನನ್ನ ಗಮನಕ್ಕೆ ಬಂದಿಲ್ಲ. ಅದು ನನ್ನ ಗಮನಕ್ಕೆ ಬಂದ ಮೇಲೆ ಅದನ್ನು ಪರಿಶೀಲಿಸಿ, ತಮಗೆ ಪ್ರಸ್ತಾಪಿಸಲು ನಾನು ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ದಿವಂಗತ ಗುಂಡೂರಾವ್ ರವರ ಬಗ್ಗೆ ಪತ್ರಿಕೆಯಲ್ಲಿ ಬಂದಿದೆ. ದಿನೇಶ್ ಗುಂಡೂರಾವ್‌ರವರು ಅವರ ಪುತ್ರರಾಗಿದ್ದಾರೆ. ಅವರ ತಂದೆ ಮೇಲೆ, ಅವರ ಅಮ್ಮನ ಮೇಲೆ ಇವತ್ತಿನ ದಿವಸ ಆಪಾದನೆ ಬಂದಿದೆ. ಆ ಬಗ್ಗೆ ತಮ್ಮ ಹಕ್ಕುಚ್ಯುತಿಯಾಗಿದೆ ಎಂದು ಸದನದಲ್ಲಿ ಪ್ರಸ್ತಾಪಿಸಲು ಅವರು ತಮಗೆ ಸೂಚನೆಯೊಂದನ್ನು ಕೊಟ್ಟಿದ್ದಾರೆ. ಅದಕ್ಕೆ ತಾವು ಹೆಚ್ಚಿನ ರೀತಿಯಲ್ಲಿ ಗೌರವ ಮತ್ತು ಪ್ರಾಧಾನ್ಯತೆ ಕೊಟ್ಟು ಚರ್ಚೆಗೆ ಅವಕಾಶ ಮಾಡಿಕೊಡಬೇಕು. ಅವರ ಅನಿಸಿಕೆಗಳನ್ನು ತಾವು ಕೇಳಬೇಕು.

ಅಧ್ಯಕ್ಷರು: ಕೇಳೋಣ

ಶ್ರೀ ಧರ್ಮಸಿಂಗ್: ಈಗಾಗಲೇ ಅವರು ಕಾರ್ಯದರ್ಶಿಯವರಿಗೆ ಆ ಬಗ್ಗೆ ಸೂಚನೆಯನ್ನು ಕೊಟ್ಟಿದ್ದಾರೆ. ಅದಕ್ಕೆ ಹೆಚ್ಚಿನ ಮಹತ್ವ ಕೊಟ್ಟು, ಚರ್ಚೆ ಮಾಡಲಿಕ್ಕೆ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು: ಮಾನ್ಯ ಸದಸ್ಯರು ಸೂಚನೆ ಕೊಟ್ಟಿರುವುದು ನನ್ನ ಗಮನಕ್ಕೆ ಬಂದಿಲ್ಲ. ಅದು ಕಾರ್ಯದರ್ಶಿಗಳ ಬಳಿ ಇರಬಹುದು. ಅದನ್ನು ನೋಡಿ, ಪರಿಶೀಲಿಸಿ ನಾನು ಚರ್ಚೆ ಮಾಡಲಿಕ್ಕೆ ಅವಕಾಶ ಮಾಡಿ ಕೊಡುತ್ತೇನೆ.

ಶ್ರೀ ಧರ್ಮಸಿಂಗ್: 'ಈ ಸಂಜೆ' ಪತ್ರಿಕೆಯಲ್ಲಿ ಗುಂಡೂರಾವ್ ಬಗ್ಗೆ ಪ್ರಕಟವಾಗಿರುವ ಬಗ್ಗೆ ಅವರಿಗೆ ನೋವು ಉಂಟಾಗಿದೆ. ಅವರಿಗೆ ಅದನ್ನು ಪ್ರಸ್ತಾಪಿಸಲು ತಾವು ಇವತ್ತೇ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು: ಆಯಿತು, ಪರಿಶೀಲಿಸಿ ಇವತ್ತೇ ಅದನ್ನು ಪ್ರಸ್ತಾಪಿಸಲು ಅವಕಾಶ ಮಾಡಿಕೊಡುತ್ತೇನೆ.

4. ಕಾರ್ಯದರ್ಶಿಯವರ ವರದಿ

ಅಪರ ಕಾರ್ಯದರ್ಶಿ: ಕಳೆದ ಅಧಿವೇಶನದಲ್ಲಿ ವರದಿಯನ್ನು ಒಪ್ಪಿಸಿದ ನಂತರ ರಾಜ್ಯಪಾಲಕರಿಂದ ಒಪ್ಪಿಗೆ ಪಡೆದ ವಿಧೇಯಕಗಳ ಪಟ್ಟಿಯನ್ನು ಸಭೆಯಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು: ಸಭೆಯ ಮುಂದಿಡಲಾದ ಕಾಗದಪತ್ರಗಳು ಮೊದಲನೇ ಪಟ್ಟಿ.

5. ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮುಖ್ಯಮಂತ್ರಿಗಳು) ಅವರು;

1978ರ ಕರ್ನಾಟಕ ರಾಜ್ಯ ನಾಗರೀಕ ಸೇವಾ ಅಧಿನಿಯಮ 8(3) ರ ಪ್ರಕರಣದ ಮೇರೆಗೆ:

1.1947 ರ ಕರ್ನಾಟಕ ನಾಗರೀಕ ಸೇವೆಗಳು (ಸೇವಾ ಮತ್ತು ಕನ್ನಡ ಭಾಷಾ ಪರೀಕ್ಷೆಗಳು) ನಿಯಮಗಳ ಅನುಸೂಚಿ 2ಕ್ಕೆ ತಿದ್ದುಪಡಿ